ಬರ್ಬೇಕು ಅಂತ ಹೇಳಿದ್ದಾರಂತೆ ಗಿರಿಜಾ ಆಂಟಿ ಅವಳ ಗಂಡನ ಕಂಪೆನೀಲಿ ಮಾಸ್ ಲೇ ಆಫ್. ಮುಂದಿನ ತಿಂಗಳಿಂದ ಹೊಸ ಕೆಲಸ ಹುಡ್ಕೋಬೇಕು ಅದೇನಾಗುತ್ತೋ ಅಂತ ನೊಂದುಕೊಳ್ತಿದ್ಳು. ಆಗಾಗ ನರ್ಮದಾಳ ವಿಷಯ ಅವನಿ ಹಂಚಿಕೊಳ್ತಿದ್ಳು. ಮದುವೆಯಾಗಿ ವಿದೇಶದಲ್ಲಿದ್ದರೂ ಗೆಳತಿಯರ ನಡುವೆ ಸಂಪರ್ಕವಿತ್ತು. ನಮಗೆ ತಿಳಿದಂತೆ ನರ್ಮದೆಯ ಗಂಡನಿಗೆ ಬೇರೆ ಕೆಲಸ ಸಿಗಲಿಲ್ಲ. ಜೊತೆಗೆ ಅದೇನು ದುಶ್ಚಟವೋ ಅನಾರೋಗ್ಯಕ್ಕೆ ತುತ್ತಾಗಿ ಸುಧಾರಿಸಿಕೊಳ್ಳಲೇ ಇಲ್ಲ ಹಾಸಿಗೆಯಲ್ಲೇ ನಾಲ್ಕೈದು ತಿಂಗಳು ಕಳೆದದ್ದಷ್ಟೇ ಲಾಭ. ಚಿಕಿತ್ಸೆಗೆ ಸುರಿದಿದ್ದೇ ಆಗಿತ್ತು. ಮಗನಿಗೆ ನಾಲ್ಕೈದು ವರ್ಷ ಅಲ್ಲವೇ ಅವನು ತೀರಿಕೊಂಡಾಗ? ಆನಂತರ ಕೆಲವೇ ದಿನಗಳಲ್ಲಿ ಸೊಸೆ ತನ್ನ ತವರನ್ನು ಸೇರಿಕೊಂಡಿದ್ದಳು. ಅತ್ತೆ ಮಾವನ್ನ ಬಿಟ್ಟು ಹೋಗಿದ್ದು ಸರಿಯೇ? ಒಂದಷ್ಟು ಗಾಸಿಪ್ ಹರಿದಿತ್ತು. ಅದರೊಂದಿಗೆ ಮಗನ ವಿಮೆ ದುಡ್ಡು ಒಂದು ಕಾಸೂ ಕೊಡದೆ ಜಾಗ ಖಾಲಿ ಮಾಡಿದ್ದಳು ಎಂಬ ಆರೋಪ.

ನರ್ಮದಾ ಬೇಜಾರು ಮಾಡಿಕೊಂಡಳು, ಮೊಮ್ಮೊಗನ್ನ ನೋಡಿಕೊಳ್ಳೋ ತಾಳ್ಮೆ ಕಳ್ಕೊಂಡಿರೋ ಅತ್ತೆ ಹತ್ತಿರ ಹೇಗೆ ಬಿಡೋದು... ದುಃಖ ನನಗಿಲ್ವ ಅಂತ. ಆ ವಿಮೆ ಮಾಡಿಸಿದ್ದೇ ಅವಳ ಅಣ್ಣನಂತೆ. ವಿಶ್ರಾಂತ ಜೀವನಕ್ಕೆ ಆಸರೆಯಾಗುತ್ತೆ, ಉಳಿತಾಯವಾದಂತೂ ಇರುತ್ತೆ ಅಂತ. ಒಂದೇ ಒಂದು ಕಂತು ಗಂಡ ತುಂಬಿಲ್ಲ ಪೂರ್ತಿ ತಾನೇ ತುಂಬಿದ್ದು. ಈಗ ಅದೇ ನನಗೆ ದೊಡ್ಡ ಆಸರೆಯಾಗಿದೆ ಅದರಲ್ಲಿ ಪಾಲು ಕೊಡ್ಲಿಲ್ಲ ಅಂತ ಅತ್ತೆ ಸಿಟ್ಟಾದ್ರೆ ನಾನು ಏನು ಮಾಡೋಕ್ಕಾಗುತ್ತೆ? ಶಾಲೆಗೆ ಹೋಗ್ತಿರೋ ಮಗೂನ ಅಮ್ಮನ ಮನೇಲಿ ಬಿಟ್ಟು ಹೋಗ್ತೀನಿ. ಒಂದ್ವೇಳೆ ಲೇಟ್ ಆದರೂ ಸಹಿಸಿಕೊಳ್ತಾರೆ. ನನ್ನ ಅತ್ತಿಗೆ, ತಮ್ಮ ಮಗಳ ಜೊತೆ ಇವನಿಗೂ ಪಾಠ ಹೇಳ್ಕೊಡ್ತಾರೆ. ನನಗೆ ಅದೇ ಅನುಕೂಲ ಅಲ್ವ? ಆದರೆ ನನ್ನ ಬೆನ್ನ ಹಿಂದೆ ಎಷ್ಟೆಲ್ಲಾ ಮಾತಾಡ್ತಾರೆ ಗೊತ್ತ ಅಂತ ಅತ್ತುಕೊಂಡಳು ಅವನಿ ಒಂದಷ್ಟು ಮಾಹಿತಿ ಹಂಚಿಕೊಂಡಿದ್ದಳು.

***

ರಾತ್ರಿ ಅವನಿಗೆ ವಿಷಯ ತಿಳಿಸಿದೆ. ಬೆಳಗ್ಗೆ ಅರ್ಧಕ್ಕೆ ಉಳಿಸಿದ್ದ ಓದಿನ ಕಾರ್ಯಕ್ರಮ ಮುಗಿಸಿ ಪತ್ರಿಕೆಗೆ ಮೇಲ್ ಮಾಡಿದೆ. ಪ್ರಸವ ಕಳೆದು ನಿರಾಳವಾದ ಅನುಭವ.

***

ಗಿರಿಜೆಯ ಮನೆಯ ವೈಕುಂಠ ಸಮಾರಾಧನೆಗೆ ಕರೆಯಲು ನರ್ಮದಾ ಖುದ್ದು ಬಂದಿದ್ದಳು. ನನಗಂತೂ ಸಾಕಾಗಿದೆ ಆಂಟಿ, ಈಗಲೂ ಅತ್ತೆಯವರ ಹಟವೇ ಹಟ. ಅವರು ಎಲ್ಲೂ ಹೋಗೋಲ್ವಂತೆ. ಅವರಿಗೂ ವಯಸ್ಸು ಕಡಿಮೇನಾ? ವಯೋಸಹಜ ಸಮಸ್ಯೆಗಳು ಇವೆ. ಮಾವ ಇರೋತನಕ ಮನೆಯಿಂದ ಹೊರಗೆ ಕಾಲಿಡದೆ ಎಲ್ಲಾ ನಿಭಾಯಿಸ್ತಿದ್ರು. ಈಗ ಹಾಗೆ ನಡೆಯೋಕ್ಕಾಗುತ್ತ? ನಾನು ಸುಮ್ಮನೆ ಕೇಳುತ್ತಿದ್ದೆ. ಮನೆ ಇದೆಯಲ್ಲ ಅಂತ ಸೊಕ್ಕು ತೋರ್ತಾರೆ. ನಾನು ಸ್ವಲ್ಪ ಕಟುವಾಗಿ ಹೇಳ್ತಿದ್ದೀನಿ ಅಂತ ತಪ್ಪು ತಿಳ್ಕೊಬೇಡಿ, ಮಗ ಇದ್ದಾಗಲೂ ಮನೆ ತನ್ನ ತವರಿನ ಉಡುಗೊರೆ ಅನ್ನೋದನ್ನ ಆಡಿ ತೋರಿಸ್ತಿದ್ರು, ಎಷ್ಟರಮಟ್ಟಿಗೆ ಅಂದ್ರೆ ಅವರ ಮಗನಿಗೂ ಬೇಸರವಾಗೋದು ನನಗಂತೂ ಯಾವುದೊ ಅಪರಿಚಿತ ಜಾಗದಲ್ಲಿ ಇದ್ದೀನಿ ಅನ್ನಿಸ್ತಿತ್ತು. ಅವರು ಹೋದ್ಮೇಲಂತೂ ಇನ್ನೂ ಕೇಳ್ಬೇಡಿ. ಅವರ ಕೋಪ ಎಲ್ಲ ನನ್ನ ಮಗನ ಮೇಲೆ! ಸಂಜೆ ನಾನು ಕೆಲಸದಿಂದ ಬರೋದನ್ನೇ ಕಾಯ್ತಿರ್ತಿದ್ದ. ಅರ್ಥವಾಗದ ಇರೋ ವಯಸ್ಸು ಏನೇನೋ ಕಲ್ಪಿಸಿಕೊಂಡು ಹೆದರ್ತಿದ್ದ. ಕೆಲಸದ ಮೇಲೆ ಒಂದು ವಾರ ಟ್ರೇನಿಂಗ್ ಅಂತ ಬೇರೆ ಊರಿಗೆ ಹೋಗ್ಬೇಕು ಅಂದಾಗ ನಿನ್ನ ಮಗನ ಜವಾಬ್ದಾರಿ ನನಗೆ ಬೇಡ ಅಂತ ಮುಖ ತಿರುಗಿಸಿದರು. ನನ್ನ ಸಂಪಾದನೆಯಲ್ಲೇ ಮುಖ್ಯವಾಗಿ ಮನೆ ನಡೀತಿರೋದು ಅನ್ನೋದು ಮರೆತಿದ್ದರು ನೋಡಿ? ಮಗ ಇಲ್ಲದಿದ್ರೂ ಸೊಸೆ ಇದ್ದಾಳೆ ಎಂಬ ಅಕ್ಕರೆ ಇಲ್ಲ. ಅಂದೇ ಡಿಸೈಡ್ ಮಾಡಿ ಅಮ್ಮನ ಮನೆಗೆ ಹೊರಟಿದ್ದು ನನ್ನ ಅದೃಷ್ಟ, ಒಳ್ಳೆಯ ಅತ್ತಿಗೆ ನನ್ನ ಗೈರಿನಲ್ಲಿ ಮಗನನ್ನ ಚೆನ್ನಾಗಿ ನೋಡ್ಕೋತಾರೆ... ಈಗ ಅಮ್ಮ ಇದ್ದ ಬಾಡಿಗೆ ಮನೆ ಬಿಟ್ಟು ಅಣ್ಣನ ಮನೆಗೇ ಶಿಫ್ಟ್ ಆಗಿದ್ದೀವಿ. ಮೊದಲ ಅಂತಸ್ತಿನಲ್ಲಿ ಕಟ್ಟಿರುವ ಮನೆಯನ್ನು ನನಗೇ ಕೊಟ್ಟಿದ್ದಾನೆ. ಹೇಗೂ ಬಾಡಿಗೆಗೆ ಅಂತ ಅಂದ್ಕೊಂಡಿರೋದು ನೀನೇ ಬಾ ಅಂದ ಅಡ್ವಾನ್ಸ್ ಇಲ್ಲ. ಬಾಡಿಗೆಯೂ ನನಗೆ ಎಟುಕುವ ಹಾಗೆ ಇದೆ ಒಂದು ವರ್ಷವಾಯ್ತು ಅಲ್ಲಿಗೆ ಶಿಫ್ಟ್ ಆಗಿ, ಮನೆಯ ಹೆಸರು ಬೆಳದಿಂಗಳು, ಹೆಸರಿಗೆ ತಕ್ಕಂತೆ ಅಲ್ಲಿನ ಆಶ್ರಯವೇ ತಂಪಾಗಿದೆ ಹೋಗ್ಲಿ ಬಿಡು ಆ ವಿಷಯದಲ್ಲಿ ಕೈಬಿಡಲಿಲ್ಲ ದೇವರು ಎಂದೆ.



ಸಂಬಳ ಬಂದ ಕೂಡಲೇ ಅತ್ತಿಗೆಗೂ ಸ್ವಲ್ಪ ಹಣ ಕೊಡ್ತೀನಿ. ಅವರ ಸೇವೆಯನ್ನು ತಳ್ಳಿ ಹಾಕೊಕ್ಕಾಗೋಲ್ಲ ಅಲ್ವ ಆಂಟಿ? ಮಗ ಮೇಲೆ ಕೆಳಗೆ ಓಡಾಡ್ತಿರ್ತಾನೆ ಎಲ್ಲೂ ನಿರ್ಬಂಧ ಇಲ್ಲ. ಅಣ್ಣನ ಮಗಳಿಗೂ ಜೊತೆಯಾಯ್ತು. ಇಬ್ಬರು ಒಂದೇ ಶಾಲೆಗೆ ಹೋಗ್ತಾರೆ. ಸಂಜೆ ಇಬ್ಬರೂ ನಮ್ಮ ಮನೆಯಲ್ಲೇ ಪಾಠ ಓದ್ಕೊಳ್ಳೋದು. ಅಷ್ಟರಮಟ್ಟಿಗೆ ಅತ್ತಿಗೆಗೂ ರಿಲೀಫ್ ನಿಜ ಪರಸ್ಪರ ಹೊಂದಾಣಿಕೆಯಿದ್ದಲ್ಲಿ ಬದುಕು ಭಾರವಾಗೋಲ್ಲ ಎನ್ನುತ್ತಾ ಕಾಫಿ ಲೋಟ ಕೈಗಿಟ್ಟೆ. ಅವನಿ ಜೊತೆ ರೆಗ್ಯುಲರ್ ಆಗಿ ಟಚ್‌ನಲ್ಲಿ ಇದ್ದೀನಿ ಆಂಟಿ, ಕಾಫಿಯನ್ನು ಹೀರುತ್ತಾ ಅಂದಳು.

***

ಇದಾದ ಕೆಲವೇ ದಿನಗಳಲ್ಲಿ ನಮ್ಮ ಮಹಿಳಾ ಸಮಾಜದಲ್ಲಿ ಮತ್ತೊಂದು ಸುದ್ದಿ ಹರಿದಿತ್ತು. ಗಿರಿಜೆ ಸೊಸೆಯ ಜೊತೆ ಇರೋಕ್ಕೆ ರೆಡಿ ಆದರೆ ಈ ಬಾರಿ ಹಟ ಹಿಡಿದಿರುವುದು ಸೊಸೆ. ಮನೆ ತನ್ನ ಹೆಸರಿಗೆ ಮಾಡಿದರೆ ಬರಬಹುದು ಅನ್ನೋ ಕಂಡೀಷನ್! ಚರ್ಚೆಯ ವಿಷಯದಲ್ಲಿ ಸದಸ್ಯರು ಧಾರಾಳವಾಗಿ ತಮ್ಮ ಅಭಿಪ್ರಾಯವನ್ನು ಹೊಮ್ಮಿಸುತ್ತಿದ್ದರು, ಗಿರಿಜೆಯ ಗೈರಿನಲ್ಲಿ ಪ್ರತಿರೋಧದ ದಾಕ್ಷಿಣ್ಯವಿಲ್ಲ. ಅರೆ, ಸೊಸೆ ಜೊತೆ ಇರ್ತೀನಿ ಅಂತ ಮನಸ್ಸು ಬದಲಾಯಿಸಿದ್ದಾದರೂ ಹೇಗೆ? ಮೊನ್ನೆ ಹನ್ನೊಂದರ ತನಕ ಏನೂ ಹೊಟ್ಟೆಗೆ ತಿನ್ನದೇ ಕುಸಿದಿದ್ದಾರೆ ಪಕ್ಕದ ಮನೆಯವರ ಗಮನಕ್ಕೆ ಬಂದು ಉಪಚರಿಸಿ ಸೊಸೆ ಕಾಲ್ ಮಾಡಿದ್ದಾರೆ. ಆಕೆ ಬರುವಾಗಲೇ ಒಂದು ನಿರ್ಧಾರ ಮಾಡಿಕೊಂಡೆ ಬಂದಿದ್ದಾರೆ. ಮನೆ ತನ್ನ ಹೆಸರಿಗೆ ಮಾಡಿ ಬಾಡಿಗೆಗೆ ಕೊಟ್ಟರೆ ತಾನು ನೋಡ್ಕೋತೀನಿ ಅಂತ ಖಡಾಖಂಡಿತವಾಗಿ ಹೇಳಿದ್ದಾಳೆ. ಅದಕ್ಕೇ ಈಗ ಗಿರಿಜೆಗೆ ಯೋಚನೆ ಶುರುವಾಗಿರೋದು. ಅದರಲ್ಲಿ ತಪ್ಪೇನಿದೆ ಒಂಟಿಯಾಗಿ ಇರುವಷ್ಟು ಆರೋಗ್ಯವು ಇಲ್ಲ, ವರಮಾನವೂ ಇಲ್ಲ.

ಸ್ವಂತ ಮನೆ ಇದೆ ಅಂತ ನೀರು ಕುಡ್ಕೊಂಡು ಇರೋಕ್ಕಾಗುತ್ತೆ? ಅದರಲ್ಲೂ ಹೀಗಿರೋ ಮನೆಗಳ ಮೇಲೆ ಯಾರಾದ್ರೂ ಕಣ್ಣಿಟ್ಟು ದೋಚಿರೋ ಸುದ್ದಿ ಕೇಳ್ತಾನೆ ಇರ್ತೀವಿ. ಹೆತ್ತ ಮಕ್ಕಳು ಇದ್ದೆ ಆಶ್ರಮಕ್ಕೆ ತಳ್ಳಿ ಕೈಯೊರೆಸಿಕೊಳ್ಳೋ ಮಂದಿ ಇರುವಾಗ ಮಗ ಇಲ್ಲದಿದ್ರೂ ಸೊಸೆ ತಾನು ಜವಾಬ್ದಾರಿ ತೊಗೋತೀನಿ ಅನ್ನೋದಕ್ಕಾದರೂ ಮೆಚ್ಕೋಬೇಕು.

ಇನ್ನೊಂದು ಸಲ ಕುಸಿದು ಬಿದ್ರೆ ಸೊಸೆ ಬರ್ತಾಳೆ ಅಂತೀರಾ? ನಿಮ್ಮ ಹಟ ಇದ್ರೆ ನಿಮಗಿರಲಿ ಅಂತ ಮುಖ ತಿರುಗಿಸೋಲ್ವೆ? ಏನೋ ಎಲ್ಲ ವಿಷಯಗಳನ್ನೂ ಸಾವಧಾನವಾಗಿ ಯೋಚಿಸಿ ಒಳ್ಳೆ ನಿರ್ಧಾರಕ್ಕೆ ಬರೋದು ಒಳ್ಳೆಯದು. ನೆರೆಯವರಿಗೆ ಹೊರೆ ಆಗಬಾರದು ನೋಡಿ ಸಹಾಯ ತೊಗೊಳ್ಳೋಕ್ಕೂ, ಮಾಡೋಕ್ಕೂ ಒಂದು ಮಿತಿ ಇದೆ. ನನಗೆ ಅವನಿಯಿಂದ ಅರೆಬರೆ ವಿಷಯ ತಿಳಿದಿದ್ದರಿಂದ ಸುಮ್ಮನೆ ಕೇಳುವುದಷ್ಟೇ ಆಗಿತ್ತು.